**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

ಸಿಸಿ ನಂಃ **575/2025**
ಸಿಡಬ್ಲ್ಯೂಃ **10** ಪಿಡಬ್ಲ್ಯೂಃ **6**

**ಸಾಕ್ಷಿಯನ್ನು ಇಂದು ದಿನಾಂಕಃ 19-02-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು : ಎಲ್ ಎ ಡಿ ಸಿ ವಕೀಲರಿಂದಃ**

ನನ್ನ ಊರಿಂದ ಮುಗಳಖೋಡ ಸುಮಾರು 15 ಕಿ.ಮೀ ಅಂತರದಲ್ಲಿ ಇರುತ್ತದೆ. ನಾನು ಮೋಟಾರ ಸೈಕಲನ್ನು ಮುಗಳಖೋಡ ಮುತ್ತ್ಯಾನ ಗುಡಿಯ ಬಲಗಡೆಯಲ್ಲಿ ನಿಲ್ಲಿಸಿದ್ದೆನು, ಆದರ ಸದರಿ ಸ್ಥಳದ ಏರಿಯಾದ ಹೆಸರು ನನಗೆ ಗೊತ್ತಿಲ್ಲ. ನಾನು ಯಾವ ದಿನ ಜಾತ್ರೆ ನೋಡಲು ಹೋಗಿದ್ದೆನು ಎಂದು ಗೊತ್ತಿಲ್ಲ. ಪ್ರಸ್ತುತ ಪ್ರಕರಣದ ಕುರಿತು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಹೌದು. ಚಾಸಾ-1 ರವರ ವಾಹನದ ಬಣ್ಣ ಮತ್ತು ವಾಹನದ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಚಾಸಾ-1 ರವರ ವಾಹನಗಳೊಂದಿಗೆ ಇತರ ವಾಹನಗಳು ಕಳುವಾಗಿರುತ್ತವೆ ಎಂದು ಪಿರ್ಯಾದಿಯಲ್ಲಿ ನಮೂದಿಸಿದ್ದು , ಇತರ ವಾಹನಗಳ ಸಂಖ್ಯೆ ನನಗೆ ಗೊತ್ತಿಲ್ಲರುವುದಿಲ್ಲ. ಅದರಂತೆ ಸದರಿ ವಾಹನಗಳನ್ನು ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಹೌದು . ಕಳ್ಳತನ ಮಾಡಿದ ವ್ಯಕ್ತಿಯನ್ನು ಪೊಲೀಸರು ತೋರಿಸಿದಾಗಲೇ ನನಗೆ ಗೊತ್ತಾಗಿದ್ದು , ಅದರ ಪೂರ್ವದಲ್ಲಿ ನನಗೆ ಸದರಿ ವ್ಯಕ್ತಿಯ ಕುರಿತು ಗೊತ್ತಿರ್ಲಿಲ್ಲ ಎಂದರೆ ಹೌದು. ಸದರಿ ವ್ಯಕ್ತಿಯೇ ಕಳ್ಳತನ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ ಎಂದರೆ ಹೌದು. ಚಾಸಾ-1 ರವರು ಯಾವ ದಿನಾಂಕದಂದು ಪಿರ್ಯಾದಿಯನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರಸ್ತುತ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರದೇ ಇದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-
**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**